ಶ್ರೀ ಸಿ. ಬೈರೇಗೌಡ : ವ್ಯವಸಾಯದಲ್ಲಿ ಬರತಕ್ಕ ಪದಗಳಿಲ್ಲ, ಹೇಳಿಕೆಗಳಲ್ಲಿ ಖಾರಿಫ್ ರಬಿ ಎಂದು ಹೇಳುತ್ತಾರೆ. ರಬಿ, ಖಾರಿಫ್ ಎಂಬುವು ಡೆಲ್ಲಿಯಲ್ಲಿ ಬಳಸಿದ ಪದಗಳು.

ಅಧ್ಯಕ್ಷರು : ಚರ್ಚೆಗೆ ವ್ಯವಸಾಯ ಸ್ಪಂದಿಸಿರಲಿಲ್ಲ. ಮಾನ್ಯ ಸದಸ್ಯರು ವ್ಯವಸಾಯವನ್ನು ಸ್ಪಂದಿಸಿದ್ದಾರೆ.

ಶ್ರೀ ಸಿ. ಬೈರೇಗೌಡ : ಕನ್ನಡ ಪದಗಳು ಏನಿದೆ ಅವನ್ನು ನೀವೇ ತನ್ನಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಏಪ್ರಿಲ್ ಒಂದನೇ ತಾರೀಖು ಶ್ರೀ ವಾಟಾಳ್ ನಾಗರಾಜ್ ಅವರು ಏನು ವಿಷಯ ಎತ್ತಿದ್ದಾರೆ ಅದು ಒಳ್ಳೆಯ ರೀತಿಯಲ್ಲಿ ಅಂತ್ಯವಾಗಿದೆ.

ಈಗ ಚಲನಚಿತ್ರ ನಿರ್ಮಾಪಕರ ಶ್ರೀ ಸತ್ಯಜಿತ್‌ರಾಯ್ ಅವರಿಗೆ ಅಭಿನಂದನೆ.

ಮಾನ್ಯ ಸದಸ್ಯರೇ,

ಕಲ್ಕತ್ತದ ಚಿಕಿತ್ಸಾಲಯವೊಂದರಲ್ಲಿ ಸಾವಿನೊಡನೆ ಸೆಣಸಾಡುತ್ತಿರುವ ಅಪ್ರತಿಮ ಸಾಹಸಗಾರ, ಅಸಾಧಾರಣ ಪ್ರತಿಭಾಶಾಲಿ ಶ್ರೀ ಸತ್ಯಜಿತ್‌ರಾಯ್ ಅವರ ಹೆಸರನ್ನು ಕೇಳದ ಭಾರತೀಯರಾರು? ಭಾರತೀಯ ಚಲನಚಿತ್ರ ಜಗತ್ತಿಗೆ ಒಂದು ಹೊಸ ಆಯಾಮವನ್ನೇ ನೀಡಿದ ಮೇರು ಸದೃಶ ವ್ಯಕ್ತಿತ್ವದ ಶ್ರೀ ರಾಯ್ ಅಘಾದ ಕಲ್ಪನಾಶಕ್ತಿಗೆ ಮತ್ತೊಂದು ಹೆಸರು. ತನ್ನ ಕನಸೆಲ್ಲವನ್ನು ನನಸು ಮಾಡಿದ ಅಪರೂಪದ ಈ ಚಿತ್ರಬ್ರಹ್ಮನಿಗ ರಾಷ್ಟ್ರ ತನ್ನ ಅತ್ಯುನ್ನತ ಗೌರವವಾದ 'ಭಾರತ ರತ್ನ' ಪ್ರಶಸ್ತಿ ನೀಡಿ ಗೌರವಿಸಿರುವುದು ಇಡೀ ರಾಷ್ಟ್ರಕ್ಕೆ ಅಭಿಮಾನದ ಸಂಗತಿ. ಇದರ ಬೆನ್ನಿಗೆ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ವಿಶ್ವವಿಖ್ಯಾತ ಹಾಲಿವುಡ್ ತನ್ನ ಪ್ರತಿಷ್ಠಿತ 'ಆಸ್ಕರ್' ಪ್ರಶಸ್ತಿಯನ್ನೂ ನೀಡಿರುವುದು ಭಾರತೀಯರೆಲ್ಲರ ಸಂತೋಷವನ್ನು ಇಮ್ಮಡಿ ಮುಮ್ಮಡಿಗೊಳಿಸಿದೆ. ಈ ಶುಭಸಂದರ್ಭದಲ್ಲಿ ಸತ್ಯಜಿತ್‌ರೇ ಅವರನ್ನು ಮನಃಪೂರ್ವಕವಾಗಿ ಅಭಿನಂದಿಸಿ, ಅವರ ಆರೋಗ್ಯ ಶೀಘ್ರವಾಗಿ ಸುಧಾರಿಸಿ, ಮತ್ತೆ ಅವರು ಅಂತರಾಷ್ಟ್ರೀಯ ಕಾರ್ಯರಂಗಕ್ಕೆ ಮರಳಿ ಕಾರ್ಯೋನ್ಮುಖರಾಗಿ, ರಾಷ್ಟ್ರದ ಖ್ಯಾತಿಯನ್ನು ಮತ್ತೂ ಹೆಚ್ಚಿಸುವಂತಾಗಲೆಂದು ಸದನದ ಗೌರವಾದರಗಳಿಂದ ಹಾರೈಸುತ್ತದೆ.

(ಮಾನ್ಯ ಸದಸ್ಯರೆಲ್ಲರೂ ಚಪ್ಪಾಳೆ ತಟ್ಟಿ ಶುಭ ಹಾರೈಸಿದರು)

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ : ಐದು ವರ್ಷಗಳಿಗೊಮ್ಮೆ ಅರಾಕ್‌ನ್ನು ಗುತ್ತಿಗೆ ಕೊಡುವ ಬಗ್ಗೆ

ಶ್ರೀ ಆರ್. ವಿ. ದೇಶಪಾಂಡೆ : (ಹಲಿಯಾಳ) ನಿಜವಾಗಿ ಏಪ್ರಿಲ್ ಫೂಲ್ ಆದಹಾಗೆ ಆಯಿತು. ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೆ. ಅದರ ಬಗ್ಗೆ ತಾವು ನಿರ್ಣಯ ಕೊಡಬೇಕಾಗುತ್ತದೆ. ನಾನು ಕೊಠಡಿಗೆ ಬಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಏನು ಬರೀ ಕೈ-ಬಾಯಿ ಸನ್ನೆ ನಡೆಯುತ್ತಿದೆಯಲ್ಲ, ವಿಚಾರ ಏನು ಎಂದು ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಅದು ಗಹನವಾದ ವಿಚಾರ. ಮಾತಿನ ಜೊತೆಗೆ ಕೈ, ಬಾಯಿ, ಕಣ್ಣು ಸನ್ನೆಗಳು.

ಶ್ರೀ ಡಿ.ಬಿ. ಚಂದ್ರೇಗೌಡ : ಈ ಸದನದಲ್ಲಿ ಒಂದು ಪ್ರಿವಿಲೇಜ್ ಪ್ರಶ್ನೆ ಬಂದಿತ್ತು.

ಅಧ್ಯಕ್ಷರು : ನಾನು ಸದನ ಮುಗಿಯುವುದರೊಳಗೆ ಅದರ ಬಗ್ಗೆ ತೀರ್ಮಾನ ಪ್ರಕಟಮಾಡುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೇನೆ. ಅದಕ್ಕೆ ಶ್ರೀ ಗುರುಪಾದಪ್ಪನವರು, ಶ್ರೀ ಕೌಜಲಗಿಯವರು ಮತ್ತು ಶ್ರೀ ಸಿದ್ದನಗೌಡರು ಸಹಿ ಹಾಕಿದ್ದಾರೆ. ಅದೇನೆಂದರೆ, ಈ ಸರ್ಕಾರ ಪ್ರತಿವರ್ಷ ಏನು ಅರಾಕ್ ಪರಾಜು ಹಾಕುತ್ತಿದೆ ಅದನ್ನು 5 ವರ್ಷಗಳಿಗೊಮ್ಮೆ ಗುತ್ತಿಗೆ ಕೊಡುವ ನಿರ್ಣಯ ಮಾಡಿದ್ದಾರೆಂದು ಗೊತ್ತಾಗಿದೆ.

ಅಧ್ಯಕ್ಷರು : ನೀವು ಅಡ್ಜರ್ನ್‌ಮೆಂಟ್ ಪೋಷನ್ ಎಂದು ಹೇಳಿ ಕಳುಹಿಸಿದ್ದೀರಿ. ಅದು ಹೇಗೆ ಅಡ್ಜರ್ನ್‌ಮೆಂಟ್ ಪೋಷನ್ ಆಗುತ್ತದೆ. ಈಗತಾನೇ ಬಜೆಟ್ ಚರ್ಚೆಯಾಗಿ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಆಗಿ....